ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು) :

ಅ) ಎನ್.ಎಸ್.ಪಿ. ಮುಂತಾದ ಕೆಲವು ಯೋಜನೆಗಳಲ್ಲಿ 1996-97ರಲ್ಲಿ 1-10-96ರ ನಂತರ ಹಣ ಹೂಡಿದವರಿಗೆ ಶೇಕಡ2 ರಂತೆ ಇನ್ಸೆಂಟಿವ್ ನೀಡಲಾಗುವುದೆಂದು ಘೋಷಿಸಲಾಗಿತ್ತು. ಅದರಂತೆ ಇನ್ಸೆಂಟಿವ್ ನೀಡಲಾಗುತ್ತಿದೆ.

ಆ) ಹಣ ಹೂಡಿದವರಿಂದ ಇನ್ಸೆಂಟಿವಗಾಗಿ 1,51,469 ಕ್ಲೇಂಗಳು ಬಂದಿದ್ದು ಅವುಗಳಲ್ಲಿ 46,336ನ್ನು ಪಾವತಿ ಮಾಡಲಾಗಿದೆ. ಉಳಿದವನ್ನು ಪಾವತಿ ಮಾಡಲಾಗುತ್ತಿದೆ.

ಇ) ಪರಿಶೀಲಿಸಲಾಗುವುದು.

ರಸ್ತೆಗಳ ದುರಸ್ಥಿಗೆ ಗ್ಯಾಂಗ್‌ಮನ್‌ಗಳ ಕೊರತೆ

2307 - ಶ್ರೀ ಎಸ್. ಅಂಗಾರ (ಸೂಳ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವ ರಸ್ತೆಗಳ ನಿರ್ವಹಣೆಗೆ (ಅಭಿವೃದ್ಧಿ) ಗ್ಯಾಂಗ್‌ಮನ್‌ಗಳು ಇಲ್ಲದೇ ರಸ್ತೆಗಳಲ್ಲಿ ಹೊಂಡಗುಂಡಿಗಳು ಬಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗುವುದನ್ನು ತಡೆಗಟ್ಟಲು ಸರಕಾರ ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು)?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಬರುವ ರಸ್ತೆಗಳ ನಿರ್ವಹಣೆಗೆ (ಅಭಿವೃದ್ಧಿಗೆ) ಹಾಗೂ ರಸ್ತೆಗಳಲ್ಲಿ ಗುಂಡಿಗಳು ತುಂಬುವ ಕಾಮಗಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ಗುತ್ತಿಗೆ -ದಾರರಿಗೆ ವಹಿಸಿ ಕೊಡಲಾಗುತ್ತದೆ. ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಕೇಸುಗಳ ತ್ವರಿತ ವಿಲೇವಾರಿ

2308 - ಶ್ರೀ ಎಂ.ಪಿ. ಅಪ್ಪಚ್ಚುರಂಜನ್ (ಸೋಮವಾರಪೇಟೆ) : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ಮೂರು ತಾಲ್ಲೂಕಿನಲ್ಲಿ ಎಷ್ಟು ಕೇಸುಗಳು ವಿಲೇವಾರಿಯಾಗದೆ ಬಾಕಿ ಇವೆ? ಅದರಲ್ಲಿ ಕ್ರಿಮಿನಲ್ ಕೇಸುಗಳು ಎಷ್ಟು ಮತ್ತು ಸಿವಿಲ್ ಕೇಸುಗಳು ಎಷ್ಟು?

ಆ) ತ್ವರಿತವಾಗಿ ವಿಲೇವಾರಿ ಮಾಡಲು ಏನೇನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ದಿನಾಂಕ 1-7-97 ರಲ್ಲಿ ಇದ್ದಂತೆ ಬಾಕಿ ಇರುವ ಪ್ರಕರಣಗಳು ಈ ಕೆಳಗಿನಂತಿದೆ :-

	ಸಿವಿಲ್	ಕ್ರಿಮಿನಲ್
ಕೊಡಗು-ಮಡಿಕೇರಿ	2648	3751
ವಿರಾಜಪೇಟೆ	1392	1329
ಸೋಮವಾರಪೇಟ್	405	1325

ಆ) ತ್ವರಿತವಾಗಿ ವಿಲೇವಾರಿ ಮಾಡಲು ಈ ಹಿಂದೆ ರಾಜ್ಯ ಕಾನೂನು ನೆರವು ಸಮಿತಿಗಳ ಮೂಲಕ ಲೋಕ ಅದಾಲತ್‌ಗಳನ್ನು ಎಲ್ಲಾ ನ್ಯಾಯಾಲಯಗಳಲ್ಲಿ ನಡೆಸಿ ಕೇಸುಗಳ ತ್ವರಿತ ವಿಲೇವಾರಿಗಳನ್ನು ಮಾಡಲಾಗುತ್ತಿತ್ತು. ಈಗ ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದು ರಾಜ್ಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಕಾನೂನು ಸೇವ ಪ್ರಾಧಿಕಾರಗಳ ಮುಖಾಂತರ ಮೊಕದ್ದಮೆಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ?

ಮಾಗಡಿಯಲ್ಲಿ ಕೆಂಪೇಗೌಡ ಜಿಲ್ಲೆ ಉತ್ಸವ

2309 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಮಾನ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ಜಿಲ್ಲೆಗೊಂದು 'ಜಿಲ್ಲಾ ಉತ್ಸವ' ನಡೆಸುವಂತೆ 1997-98ನೇ ಸಾಲಿನಲ್ಲಿ ಮಾಗಡಿಯಲ್ಲಿ 'ಕೆಂಪೇಗೌಡ ಜಿಲ್ಲಾ ಉತ್ಸವ' ನಡೆಸುವ ಪ್ರಸ್ತಾವವು ಸರ್ಕಾರ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ, ಯಾವಾಗ ನಡೆಸಲಾಗುವುದು?

ಇ) ಈ ಉತ್ಸವದ ರೂಪರೇಷೆ ಹಾಗೂ ಅಂದಾಜು ವೆಚ್ಚವೇನು (ಸಂಪೂರ್ಣ ಮಾಹಿತಿ ನೀಡುವುದು)?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಆ) ಮತ್ತು ಇ) ರಾಜ್ಯದಲ್ಲಿ ಜಿಲ್ಲಾ ಉತ್ಸವಗಳನ್ನು ವ್ಯವಸ್ಥಿತವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ಆಯಾಯ ಜಿಲ್ಲೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಗೌರವಾಧ್ಯಕ್ಷತೆಯಲ್ಲಿ ಹಾಗೂ ಜಿಲ್ಲಾಧಿಕಾರಿಗಳ ಕಾರ್ಯಾಧ್ಯಕ್ಷತೆಯಲ್ಲಿ ಜಿಲ್ಲಾ ಉತ್ಸವ ಸಮಿತಿಗಳನ್ನು ರಚಿಸಲಾಗಿದೆ ಆದ್ದರಿಂದ ಜಿಲ್ಲಾ ಉತ್ಸವ ನಡೆಸುವ ವಿಷಯವನ್ನು ಆಯಾಯ ಜಿಲ್ಲಾ ಉತ್ಸವ ಸಮಿತಿಗಳ